ಉದಾಸೀನದಿಂದ ಚಹಾಗೆ ನೀರಿಟ್ಟಳು. ಬೆಳಗಿನ ತಿಂಡಿಯನ್ನು ತನ್ನೊಬ್ಬಳಿಗೇ ಅಲ್ಲದೆ ದೇವಿಯ ಸಲುವಾಗಿಯೂ ಮಾಡಬೇಕಿತ್ತು. ಒಂದೆರಡು ಕ್ಷಣ ಕಳೆದು ಮತ್ತೆ ಯಾರೋ ಕರೆದಂತೆನಿಸಿತು. 'ಹೌದೇ' ಎಂಬ ಸೋಜಿಗದಿಂದ ಅಂಗಳಕ್ಕೆ ಬಂದರೆ ಅಪರಿಚಿತ ಹೆಂಗಸೊಬ್ಬಳು ನಿಂತಿದ್ದಳು. 'ಒಂದು ಬುಟ್ಟಿ ಶೆಗಣಿ ಕೊಡ್ರಿ ಅಮಾ, ಸಾರಸ್ಬೇಕಾಗೇತಿ' ಎಂದು ಕೇಳಿದಳು ಆಕೆ. ಆಕೆಯನ್ನು ಅಡಿಯಿಂದ ಮುಡಿವರೆಗೆ ದಿಟ್ಟಿಸಿದಳು ಗಂಗಕ್ಕ. ಮಾಸಲು ಸೀರೆಯಾದರೂ ಒಪ್ಪವಾಗಿ ತಲೆ ಬಾಚಿ ಹಣೆಗಿಟ್ಟುಕೊಂಡು ಅರೆಮುದುಕಿಯಂತಿದ್ದ ಈಕೆ ಯಾರೋ ಏನೋ. ಅರೆರೆ! ಕೇಳಿದ್ದೊಂದೇ ಅಲ್ಲ, ಬುಟ್ಟಿ ಹಿಡಿದು ಅಂಗಳ ದಾಟಿ ಮನೆ ಬಾಗಿಲಿಗೇ ಬಂದಳಲ್ಲ. ಹೀಗೆ ಬಿಟ್ಟರೆ ಮನೆಯೊಳಗೂ ಬಂದಾಳು ಎಂದು ಗಾಬರಿಯಾದ ಗಂಗಕ್ಕ, 'ಎಂತದೂ ಇಲ್ಲ, ಹೋಗೆ' ಎನ್ನುತ್ತಾ ಕದವಿಕ್ಕಿದಳು. 'ಅಯ್ಯಪ್ಪಾ! ಅದರ ನೋಡಿ ಎಂಗಂತೂ ಎದೆಲ್ಲಿ ಎಸರಿಲ್ಲೆ ಮಾರಾಯ್ತಿ' ಎಂದು ಸ್ವಲ್ಪ ಹೊತ್ತಿನಲ್ಲೇ ಬಂದ ದೇವಿಯ ಬಳಿ ತೋಡಿಕೊಂಡಳು ಗಂಗಕ್ಕ.

'ಯಾರ್‍ದ್ರಾ ಅದು? ಬಡಿಬಡೀಕೆ ಕರೀಕಿದ್ದ ಹೆಂಗ್ಸಾ?'

'ಹೌದೇ, ಕೆನ್ನೆಯೆಲ್ಲಾ ಒಳಗೆ ಹೋಗಿ...'

'ಗೊತ್ತಾತು ಬಿಡಿ. ಆ ಬಿಡಾರದ ಹೆಂಗ್ಸು ಅದು. ಪಾಪದ್ ಪ್ರಾಣಿ.'

'ಸುಮ್ನಿರು ಮಾರಾಯ್ತಿ. ಮೊದಲೆಲ್ಲಾ ಪಾಪದವ್ರಂಗಿದ್ ಕಡೀಗೆ ಕನ್ನ ಹಾಕ್ತ.'

'ನೀವೂ ಸಮಾ ಗಂಗಮ್ಮ. ಯಾರನ್ನೂ ನಂಬೂದಿಲ್ಲ ಬಿಡಿ.'

'ಯಾರನ್ನ ನಂಬಿ ಏನು ಬಂತು ಹೇಳು? ಅವ್ರೊಂದು ಬಿಡಾರ ಕಿತ್ಗಂಡ್ ಹೋಪವರಿಗೆ ಸುಖಯಿಲ್ಲ.'

'ನಾ ಕಂಡ್ ಲೆಕ್ಕದಲ್ಲಿ ಹಾಂಗಿಲ್ರ ಅವ್ರು' ಎಂಬ ದೇವಿಯ ಮಾತಿಗೆ, 'ನಿನ್ ಲೆಕ್ಕ ನೀನೆ ಇಟ್ಗ' ಎಂದು ಸಿಡುಕಿ ಒಳನಡೆದಳು ಗಂಗಕ್ಕ.

ದೇವಿ ಹೇಳಿದ್ದೂ ಸಮವೇ. ಯಾರನ್ನೂ ಸುಲಭಕ್ಕೆ ನಂಬುವ ಆಸಾಮಿಯಲ್ಲ ಗಂಗಕ್ಕ. ಅವಳು ಹಾಗೆ ನಂಬುವ ಜೀವಗಳೆಂದರೆ ಸಾಕಿದ ಬೆಕ್ಕು, ನಾಯಿ, ಹಸು ಮತ್ತು ಇತ್ತೀಚೆಗೆ ದೇವಿ. ಮೊದಲಿನಿಂದ ಹಾಗಿದ್ದವಳಲ್ಲ ಅವಳು. ಆಕೆಯನ್ನು ಲಗ್ನವಾಗಿ ಕರೆತಂದ ಗೋಪಾಲನಿಗೆ ಹೆಂಡತಿಯ ಮೇಲೆ ಮುಗಿಯದ ಸಂಶಯ. ಸದಾ ಆಕೆಯ ಮೇಲೊಂದು ಕಣ್ಣು ಇಟ್ಟೇ ಇರುತ್ತಿದ್ದ. ಮನೆಯಲ್ಲಿ ಬಚ್ಚಲು ಮನೆ, ಶೌಚಾಲಯಗಳೆಲ್ಲ ಇಲ್ಲದ ಆ ಕಾಲದಲ್ಲಿ ಸ್ನಾನಕ್ಕೆಂದು ತೋಟದ ಬಚ್ಚಲಿಗೆ ಹೋಗಬೇಕಿತ್ತು, ಮತ್ತೊಂದು ಕೆಲಸಕ್ಕೆ ಚೊಂಬು ಹಿಡಿದು ಗುಡ್ಡದ ಮೇಲೆಯೇ ಹೋಗಬೇಕಿತ್ತು. ಆಕೆ ಎಲ್ಲಿಯೇ ಹೋಗಲಿ, ಅವಳ ಜಾಡನ್ನರಸುತ್ತಾ ಗೋಪಾಲ ಹಾಜರಾಗುತ್ತಿದ್ದ. ಖಾಸಗಿ ಕೆಲಸಗಳಿಗೆ ಹೋದಾಗಷ್ಟೇ ಆತ ಹಿಂಬಾಲಿಸುತ್ತಿದ್ದ ಎಂದರೆ ಹಾಗೂ ಅಲ್ಲ. ಹಿತ್ತಲಿಗೆ ಗೊಬ್ಬರಕ್ಕಾಗಿ ಆಕೆ ಊರಿನ ರಸ್ತೆಗಳಲ್ಲಿ ಬುಟ್ಟಿ ಹಿಡಿದು ಸೆಗಣಿ ಹೆಕ್ಕುತ್ತಿದ್ದರೆ ಅಲ್ಲೂ ಅವನ ಹೆಜ್ಜೆಯ ಶಬ್ದ ಕೇಳುತ್ತಿತ್ತು. ಯಾರ ಮನೆಯ ಪೂಜೆ–ವ್ರತಗಳಿಗೆ ಆಕೆ ಹೋದರೂ ಅವನೂ ಅಲ್ಲಿರುತ್ತಿದ್ದ. ಕಡೆಗೆ ಬರಿ ಹೆಂಗಸರ ಕಾರ್ಯಕ್ರಮವಾದರೂ ಅವನ ನೆರಳು ಅಲ್ಲೆಲ್ಲಾದರೂ ಇದ್ದಿದ್ದೆ. ಇದರಿಂದ ಗಂಗಕ್ಕನಿಗಂತೂ ತಲೆಚಿಟ್ಟು ಹಿಡಿದು ಹೋಗಿತ್ತು.

ಗೋಪಾಲನ ತಾಯಿಗೂ ಮಗನ ಈ ಸ್ವರೂಪ ಮುಜುಗರದ ವಿಷಯವಾಗಿತ್ತು. 'ಗಂಗಾ, ನಾವೇ ಒಂದೆರಡು ದನ ಸಾಕನ. ಮಕ್ಕಳುಮರಿ ಇಪ್ಪ ಸಂಸಾರಕ್ಕೆ ಹಾಲು ಎಷ್ಟಿದ್ರೂ ಬೇಕು' ಎಂದ ಆಕೆಯ ಅತ್ತೆ, ಮಗನ ಬಳಿ ಹರಪೆ ಬಿದ್ದು ಎರಡು ದನ ಖರೀದಿಸಿ, ಸೊಸೆಗೆ ಸೆಗಣಿ ಹೆಕ್ಕುವ ಮುಜುಗರದಿಂದ ಮುಕ್ತಿ ನೀಡಿದ್ದಳು. ಇದ್ದ ಮುಕ್ಕಾಲೆಕರೆ ತೋಟದಲ್ಲಿ ಕಷ್ಟಪಟ್ಟು ದುಡಿದರೆ